4. ಅರ್ಜಿಯನ್ನೊಪ್ಪಿಸುವುದು:

ಅಧ್ಯಕ್ಷರು: ಹುಬ್ಬಳ್ಳಿ ಶಹರ ಮತಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯ ಕಲ್ಪಿಸುವ ಸರ್ಕಾರದ ಎಸ್.ಯು.ಡಿ.ಪಿ. ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಸದನಕ್ಕೆ ಅರ್ಜಿಯನ್ನೊಪ್ಪಿಸಲಾಗಿದೆ.

ವಿಷಯ: ಹುಬ್ಬಳ್ಳಿ ಶಹರ ಮತಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯ ಕಲ್ಪಿಸುವ ಸರ್ಕಾರದ ಎಸ್‌ಯುಡಿಪಿ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವ ಬಗ್ಗೆ.

5. ಗಮನ ಸೆಳೆಯುವ ಸೂಚನೆಗಳು

(ಅ) **ವಿಷಯ:** ಡಾಂಬರು, ಸಿಮೆಂಟ್ ಮತ್ತು ಕಬ್ಬಿಣದ ಬೆಲೆಗಳ ಏರಿಕೆಯಿಂದ ಈಗಾಗಲೇ ಟೆಂಡರ್ ಆಗಿರುವ ಕಾಮಗಾರಿಗಳ ಕೆಲಸ ವಿಳಂಬವಾಗಿರುವ ಕುರಿತು :

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಡಾಂಬರು, ಸಿಮೆಂಟ್ ಮತ್ತು ಕಬ್ಬಿಣದ rate ಜಾಸ್ತಿಯಾಗಿ ಅಭಿವೃದ್ಧಿ ಕಾರ್ಯಗಳು ನಿಂತುಹೋಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು): ಮಾನ್ಯ ಅಧ್ಯಕ್ಷರೆ.....

ಶ್ರೀ ಕೆ.ಆರ್. ರಮೇಶ್ ಕುಮಾರ್: ಯಾರ್ಯಾರೆಲ್ಲಾ ಟೆಂಡರ್ಸ್ ಹಾಕಿ, ಟೆಂಡರ್ಸ್ entrustment ಆಗಿತ್ತೋ ಅವರೆಲ್ಲಾ ಆಗ ಇದ್ದ ರೇಟ್ ಬೇರೆ ಈಗಿರುವ ರೇಟ್ ಬೇರೆ, ನಾವು ಕೆಲಸ ಮಾಡುವುದಿಲ್ಲವೆಂದು ಟೆಂಡರ್ ತೆಗೆದು ಕಂಕುಳದಲ್ಲಿಟ್ಟುಕೊಂಡು ಹೋಗಿದ್ದಾರೆ. ನಾವು ಹೋಗಿ ರಸ್ತೆಯಲ್ಲಿ ಹೋಗಬೇಕೆಂದು ಗುಂಡಿಯಲ್ಲಿ ಬೀಳುತ್ತಿದ್ದೇವೆ. ಆ ವಿಚಾರವನ್ನೇ ಅವರು ಪ್ರಸ್ತಾಪ ಮಾಡುತ್ತಿರುವುದು. ನಾನು ಒಂದು ಸಲ ಕೇಳಿದಾಗ ಇಲ್ಲ ಮಾತನಾಡುತ್ತೇವೆಂದು ಹೇಳುತ್ತಾರೆ. Engineers ಹೇಳಿದ್ದು contractors ಗೆ ತಲುಪುತ್ತಿಲ್ಲ. Contractors ಯಾರೂ ಮುಂದೆ ಬರುತ್ತಿಲ್ಲ. ಜನರನ್ನು ನಮಗೆ supply ಮಾಡಿದರೆ car ಗಳನ್ನು ನಾವು ಗುಂಡಿಯಿಂದ ಜನರ ಕೈಯಲ್ಲಿ ಎತ್ತಿಸಿಕೊಂಡು ಹೋಗುತ್ತೇವೆ. That is what he is trying to say. ಅದಕ್ಕೆ ಇದ್ದಾರಲ್ಲಾ, ಅವರೇ ಉತ್ತರ ಹೇಳಲಿ.

ಶ್ರೀ ಹೆಚ್.ಡಿ. ರೇವಣ್ಣ (ಮಾನ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ details ತರಿಸಿಕೊಂಡು ನಾನು ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನೀವು tenders finalise ಮಾಡಿದ ಮೇಲೆ Tar rate ಜಾಸ್ತಿಯಾಗಿದೆ. Contractors ನಮಗೆ ಗಿಟ್ಟುವುದಿಲ್ಲ. ನಾವು ಮಾಡುವುದಿಲ್ಲವೆಂದು ಹಟಕ್ಕೆ ಬಿದ್ದು ಕುಳಿತಿದ್ದಾರೆ. ಅವರಿಗೆ with retrospective effect rate raise ಮಾಡಿಕೊಡುತ್ತೀರಾ ಅಥವಾ tenders cancel ಮಾಡಿ fresh ಆಗಿ tenders ಕರೆಯುತ್ತೀರಾ? ದಿವಸ ದಿವಸಕ್ಕೆ Roads ಪರಿಸ್ಥಿತಿ ಹದಗೆಟ್ಟು ಹೋಗಿದೆ. ಲೆಕ್ಕ ಶೀರ್ಷಿಕೆ 3054 ನಲ್ಲಿಯಂತೂ ಹಣವೇ ಬರುವುದಿಲ್ಲ. ನಮ್ಮಲ್ಲೆಲ್ಲಾ ಲೆಕ್ಕ ಶೀರ್ಷಿಕೆ 3054 ಇರುವುದು. ಯಾವ 3054 ಕೆಲಸಕ್ಕೂ ಅವರು ಬರುತ್ತಿಲ್ಲ. ಅದರ ಜೊತೆಗೆ ಇದು ಬೇರೆ. ನಮ್ಮದೇನಿಲ್ಲ. ನಿಮ್ಮ ಊರಿನ ಹಾಗೆ ನಮ್ಮ ಊರನ್ನೂ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, revise ಮಾಡಿದ್ದಾರೆ. restrospective effect ಕೊಡುತ್ತೀರಾ ಎನ್ನುವುದು ಬೇಕು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ನಾನು ಮೊದಲು ಮಾತನಾಡುತ್ತೇನೆ. ದಯವಿಟ್ಟು ಎಲ್ಲರಿಗೂ ಈ ವಿಷಯದ ಬಗ್ಗೆ ಮಾತನಾಡಲು ಅವಕಾಶ ಕೊಡಿ. ನಾನು ಮಾನ್ಯ ಸದಸ್ಯರನ್ನು ಅಭಿನಂದಿಸುತ್ತೇನೆ. ಇಡೀ ಸದನದ ಎಲ್ಲ ಸದಸ್ಯರ ಒಕ್ಕೊರಲಿನ ಬೇಡಿಕೆ ಇದು. ಮಾನ್ಯ ನಮ್ಮ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಹತ್ತಿರ ಕರ್ನಾಟಕ ರಾಜ್ಯದ ಗುತ್ತಿಗೆದಾರರೂ ಕೂಡ ಬಂದು ಮನವಿ ಮಾಡಿಕೊಂಡಿದ್ದಾರೆ. ಈಗಾಗಲೇ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ, tender ಕರೆದಾಗಿದೆ. Tender ಹಿಡಿದಿದ್ದಾರೆ. ಹತ್ತೋ, ಇಪ್ಪತ್ತೋ ಅಥವಾ ಸಾವಿರ ರೂಪಾಯಿ ವ್ಯತ್ಯಾಸವಾದರೆ ಏನೂ ತೊಂದರೆ ಇಲ್ಲ. ಅವರು ಮಾಡಬೇಕು. ನಾವೇನೂ ಎಲ್ಲದಕ್ಕೂ ಕೂಡ tender condition ಪ್ರಕಾರ ಕೂಡಿಸಿಕೊಡುವುದಕ್ಕಾಗುವುದಿಲ್ಲ. ಆದರೆ, ಅಧ್ಯಕ್ಷರೆ, abnormal ವ್ಯತ್ಯಾಸವಿದೆ. ಕಳೆದ ನವೆಂಬರ್‌ಗೂ ಇವತ್ತಿಗೂ tar rate ಮೂರು, ನಾಲ್ಕು ಪಟ್ಟು ವ್ಯತ್ಯಾಸಗಳಾಗಿವೆ. ಇದನ್ನು ಯಾರೋ ನಮ್ಮ ಗುತ್ತಿಗೆದಾರರು ತಮ್ಮ ತಲೆ ಮೇಲೆ ಹಾಕಿಕೊಂಡು ಮಾಡಲಿ ಎಂದರೆ, ಅವರೇನು ಹೇಳುತ್ತಾರೆ. ಈಗಾಗಲೇ ಕಟ್ಟಿರತಕ್ಕಂಥ deposit, ಅವರ security amount ಮುಟ್ಟುಗೋಲು ಹಾಕಿಕೊಳ್ಳಲು ನಮಗೇನೂ ತೊಂದರೆ ಇಲ್ಲ. ಅದಕ್ಕಿಂತ ಹೆಚ್ಚಿನ ನಷ್ಟ ನಮಗಾಗುತ್ತೆಂದು ಹೇಳಿ ಈಗಾಗಲೇ ನಾವು ಮಾಡುವುದಕ್ಕಾಗುವುದಿಲ್ಲವೆಂದು ವಾಪಸ್ಸು ಹೋಗಿದ್ದಾರೆ. ಕಳೆದ ಬಜೆಟ್‌ನಲ್ಲಿಟ್ಟ ಹಣವನ್ನು ಇವತ್ತೂ ಕೂಡ

ಖರ್ಚು ಮಾಡಲಿಕ್ಕಾಗುತ್ತಿಲ್ಲ. 3054 ಇರಬಹುದು ಅಥವಾ ದೊಡ್ಡ ದೊಡ್ಡ building ಇರಬಹುದು pick-up ಗಳಿರಬಹುದು, ಯಾವುದರ ಕೆಲಸವನ್ನೂ ಪೂರ್ಣ ಮಾಡಲಿಕ್ಕಾಗುವುದಿಲ್ಲ. 140 ರೂಪಾಯಿಗಳು ಇದ್ದಂಥ ಸೀಮೆಂಟ್, ಕೇವಲ 3 ತಿಂಗಳೊಳಗಾಗಿ 250 ರೂಪಾಯಿಗಳಾಗಿದೆ. 300 ರೂಪಾಯಿಗಳನ್ನು ಇವತ್ತು ಕೊಟ್ಟರೂ ಸಹ ಮಾರುಕಟ್ಟೆಯಲ್ಲಿ ಸಿಮೆಂಟ್ ಸಿಗುತ್ತಿಲ್ಲ. ಇದ್ದಕ್ಕಿದ್ದ ಹಾಗೆ ಮಾಯವಾಗಿದೆ. ಕಬ್ಬಿಣದ rate ದುಬಾರಿಯಾಗಿದೆ. ಇಂಥ ಹಿನ್ನೆಲೆಯಲ್ಲಿ ಇಡೀ ರಾಜ್ಯದಲ್ಲಿ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತವಾಗಿವೆ. ಏನೂ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಶಾಸಕರಾದಂಥವರು ಹೋಗಿ ಹೇಳಿದ್ದೇವೆ. ಭಾಷಣದಲ್ಲಿ ಹೇಳಿದ್ದೇವೆ. ಇಷ್ಟು ಕೋಟಿ ರೂಪಾಯಿಗಳನ್ನು ನಮ್ಮ ತಾಲ್ಲೂಕಿನಲ್ಲಿ ಮಂಜೂರು ಮಾಡಿಸಿದ್ದೇವೆಂದು ಡಂಗೂರ ಹೊಡೆದಿದ್ದೇವೆ, ಪತ್ರಿಕೆಯಲ್ಲಿ ಹಾಕಿದ್ದೇವೆ, ಭಾಷಣದಲ್ಲಿ ಹೇಳಿದ್ದೇವೆ. ಸರ್ಕಾರವೂ ಕೂಡ ಬಜೆಟ್‌ನಲ್ಲಿ ಈಗಾಗಲೇ ಇಂತಿಷ್ಟು ಇಟ್ಟಿದ್ದೇವೆಂದು ಹೇಳಿದೆ. ಈಗ ನೀವು ಹೊಸ S.R. ಅನ್ನು ಜಾಸ್ತಿ ಮಾಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಆರಗ ಜ್ಞಾನೇಂದ್ರರವರೇ, ಒಂದ್ನಿಮಿಷ. ಮಾನ್ಯ ಅಧ್ಯಕ್ಷರೆ, ತಾವು ಇಷ್ಟಪಡುವುದಾದರೆ ಇದನ್ನು ಏನಾದರೂ ಮಾಡಿ Rule 69 ಗೆ convert ಮಾಡಿ. ಇದರ ಮೇಲೆ ಬಹಳಷ್ಟು ಜನ ಮಾತನಾಡುವವರಿದ್ದಾರೆ. ನಿಯಮ 69ಕ್ಕೆ convert ಮಾಡಿ, ಇದೇ ವಿಷಯವನ್ನು ಮಧ್ಯಾಹ್ನ ಅಥವಾ ನಾಳೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನನ್ನ ಅಭಿಪ್ರಾಯವೇನೆಂದರೆ, ಮಾನ್ಯ ಸದಸ್ಯರು ಗಮನ ಸೆಳೆಯುತ್ತಾರೆ. ಆದಾದ ಮೇಲೆ ಸಂಬಂಧಪಟ್ಟ ಸಚಿವರು ಒಂದು ಹೇಳಿಕೆ ಕೊಡುತ್ತಾರೆ. ಏಕೆಂದರೆ ಬೇರೆ ನಿಯಮದಲ್ಲಿ ಚರ್ಚೆಗೆ ಅವಕಾಶ ಕೊಟ್ಟರೆ ಎಲ್ಲರೂ ಮಾತನಾಡಿದ್ದನ್ನೇ ಮಾತನಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು calling attention ಆಗಿರುವುದರಿಂದ, ಯಾರು ಗಮನ ಸೆಳೆದಿದ್ದಾರೋ ಅವರನ್ನು ಬಿಟ್ಟು ಬೇರೆಯವರು ಮಾತನಾಡಬಾರದು.

ಅಧ್ಯಕ್ಷರು: ಒಪ್ಪಿಕೊಳ್ಳುತ್ತೇನೆ. ಆದರೆ ಎಲ್ಲರೂ ಮಾತನಾಡತಕ್ಕಂಥ ಅಗತ್ಯವಿಲ್ಲ. ಏಕೆಂದರೆ, ಅವನು ಗಮನ ಸೆಳೆದ ಮೇಲೆ ಆ ವಿಚಾರದಲ್ಲಿ ಸರ್ಕಾರ ಸ್ಪಷ್ಟವಾಗಿ ಏನು ಹೇಳುತ್ತದೋ ಅದನ್ನು ಹೇಳಲಿ.

1.00 ಪಿಎಂ

(ಗೊಂದಲ)

ಅಧ್ಯಕ್ಷರು: ನನ್ನದೇನೂ ಅಡ್ಡಿಯಿಲ್ಲ. ನಾನು ಹೇಳುವುದೇನೆಂದರೆ ಸೀಮೆಂಟ್ ಆಗಿರಬಹುದು, ಕಬ್ಬಿಣ ಆಗಿರಬಹುದು, ಡಾಂಬಾರ್ ಆಗಿರಬಹುದು, ಇಂಥ ಕೆಲವು ವಸ್ತುಗಳ ಬೆಲೆ ಸಿಕ್ಕಾಬಟ್ಟೆ ಏರಿದೆ. ಅದಕ್ಕೆ ಸರ್ಕಾರದ ಗಮನ ಸೆಳೆದಿದ್ದಾರೆ. ಸರ್ಕಾರ ವಿವರವಾಗಿ ಅದರ ಬಗ್ಗೆ ಒಂದು ಹೇಳಿಕೆ ಕೊಟ್ಟರೆ ಮುಗಿಯುತ್ತದೆ. ಎಲ್ಲರೂ ಇದರಲ್ಲಿ ಭಾಗವಹಿಸುವ ಅಗತ್ಯವಿಲ್ಲವೆನ್ನುವುದು ನನ್ನ ಭಾವನೆ.

ಶ್ರೀ ಆರಗ ಜ್ಞಾನೇಂದ್ರ: ಏನಾಗಿದೆ ಎಂದರೆ, ಅಧಿಕಾರಿಗಳ ಹತ್ತಿರ ಕೇಳಿದರೆ retrospective ಆಗಿ ಕೊಡಲಿಕ್ಕೆ ಬರುವುದಿಲ್ಲ, ಈಗಾಗಲೇ ಟೆಂಡರ್ ಕರೆದಿದ್ದೇವೆಂದೂ, A.G. ಕಡೆಯಿಂದ audit objection ಬರುತ್ತವೆಂದು ಹೇಳುತ್ತಾರೆ. ಇಂಥ ಸಂದರ್ಭದಲ್ಲಿ ಈ ಸದನದಲ್ಲಿ ಒಂದು ನಿರ್ಣಯ ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, Calling attention ನಲ್ಲಿ ಮಾನ್ಯ ಸದಸ್ಯರು ಗಮನ ಸೆಳೆಯಬೇಕು. ಸನ್ಮಾನ್ಯ ಮಂತ್ರಿಗಳು ಯಾರ್ಯಾದರೂ ಉತ್ತರ ಕೊಟ್ಟ ಮೇಲೆ ಮಾನ್ಯ ಸದಸ್ಯರು clarification ಕೇಳಬೇಕು. ಸಂಬಂಧಪಟ್ಟ ಮಂತ್ರಿಗಳು ಏನು ಹೇಳುತ್ತಾರೆಂದು ಮೊದಲು ಕೇಳೋಣ.

ಅಧ್ಯಕ್ಷರು: ಈಗ ಸರ್ಕಾರದ ಪರವಾಗಿ ಮಾನ್ಯ ಪ್ರಕಾಶ್‌ರವರು ಉತ್ತರ ಹೇಳಿ.

ಶ್ರೀ ಆರಗ ಜ್ಞಾನೇಂದ್ರ : ಅದಕ್ಕಾಗಿ ತುರ್ತಾಗಿ ಸರ್ಕಾರ ಇದಕ್ಕೆ ಆದ್ಯತೆಯನ್ನು ಕೊಡಬೇಕು. ಈ ಹಿನ್ನೆಲೆಯಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಡೀಟೇಲ್ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ನೀವೇ ಹೇಳುತ್ತೀರಾ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ....

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ಕಾಲಿಂಗ್ ಅಟೆನ್‌ಷನ್‌ಗೆ ತಾವು ಹೇಳಿಕೆ ಕೊಡಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಕಾಲಿಂಗ್ ಅಟೆನ್‌ಷನ್‌ಗೆ ಕನ್ಸರ್ನ್ಡ್ ಮೆಂಬರ್ ಸರ್ಕಾರದ ಗಮನವನ್ನು ಸೆಳೆಯುತ್ತಾರೆ. ಸರ್ಕಾರ ಒಂದು ಹೇಳಿಕೆಯನ್ನು ಸಿದ್ಧಪಡಿಸಿ ಅವರಿಗೆ, ಇತರೆಯವರಿಗೂ ಕೊಡಬೇಕು. ಅವರು

ಹೇಳಿಕೆ ಕೊಟ್ಟಾದ ಮೇಲೆ ಅದರ ಮೇಲೇನಾದರೂ ಒಂದೆರಡು ಸಂಶಯಗಳಿದ್ದರೆ ಅವರು ಸ್ಪಷ್ಟೀಕರಣ ಕೇಳುತ್ತಾರೆ. ನೀವು ಬೆಳಗ್ಗೆಯಿಂದ ಕಾಲ್ ಅಂಡ್ ಶೆಕ್ಡಾರ್ ಹೇಳಿಬಿಟ್ಟು ಈಗ ಹೇಳಿಕೆ ಇಲ್ಲವೆಂದರೆ ಹೇಗೆ ಪ್ರಕಾಶ್ ಸಾಹೇಬರೆ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು): ಯಾರೋ ಮಾನ್ಯ ರಮೇಶ್‌ಕುಮಾರ್‌ರಂಥ ಬಹಳ ಜನ ಅವಸರದಲ್ಲಿರತಕ್ಕಂಥವರು ಬಸವ ನೆಂದೊಡೆ ಪಾಪ ಎಂದು ಹೇಳಿ ಮುಂದಿನದು ಹೇಳುವುದಕ್ಕೆ ಬಿಡಲೇ ಇಲ್ಲವಂತೆ. ಬಸವನೆಂದೊಡೆ ಪಾಪ ಎಂದುಬಿಟ್ಟರೆ ಹೇಗೆ? "ಬಸವನೆಂದೊಡೆ ಪಾಪ ದಿಸೆಗೆಟ್ಟ ಪೋಪುದು" ಎಂದು ಮುಂದಿನದು ಇದೆ. ನಾನೀಗ ಹೇಳಬೇಕಾದುದು ಹೇಳಿಕೆ ಕೊಡಬೇಕೆಂದೇನೂ ಅಲ್ಲ. ನಾನು ಎದ್ದಿದ್ದು, ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ಅವರು ಬಂದ ತಕ್ಷಣವೇ ನಾನು ಅವರಿಂದ ಉತ್ತರ ಕೊಡಿಸುತ್ತೇವೆಂದು ಹೇಳಲಿಕ್ಕೆ ಎದ್ದೆ. ತಾವು ಸಮಾಧಾನದಿಂದ ಇಲ್ಲ. ಆ ಕಾರಣಕ್ಕಾಗಿ ದಯವಿಟ್ಟು ಸಮಾಧಾನದಲ್ಲಿದ್ದು ಅವರು ಬಂದ ನಂತರ ಉತ್ತರವನ್ನು ಪಡೆಯಿರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನೀವು ಪೂರ್ಣಪಾಠ ಹೇಳದೇ ಹೋದಿರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅವರ ಕಾಲಿಂಗ್ ಅಟೆನ್‌ಷನ್ ಅನ್ನು ಅಧ್ಯಕ್ಷರು ಕರೆದ ತಕ್ಷಣವೇ ಹೇಳಿಕೆಯ ಕಾಪಿ ಅಲ್ಲಿ ಹೋಗಬೇಕು. ಅದಕ್ಕೆ ತಾವು ಒಪ್ಪಿಕೊಳ್ಳಿ. ಇಲ್ಲವೆಂದರೆ ಇಲ್ಲ. ಮೊದಲು ಮಾನ್ಯ ಜ್ಞಾನೇಂದ್ರರವರ ಕೈಗೆ ಒಂದು ಕಾಪಿ ಕಳುಹಿಸಬೇಕಲ್ಲವೇ?

ಶ್ರೀ ಬಿ. ಶಿವರಾಮು: ಉತ್ತರ ಬಂದಿದೆಯೇ? ಉತ್ತರ ಬಂದಿಲ್ಲವೆಂದರೆ ನೀವು ಸರ್ಕಾರದ ಗಮನವನ್ನೇ ಸೆಳೆದಿಲ್ಲವೆಂದಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಂದಿದೆಯೇ? ಇಲ್ಲವೇ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ರೂಲ್ಸ್ ಅಲ್ಲ. ಅವರು ಉತ್ತರ ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಲ್ಲ, ಉತ್ತರ ಅಲ್ಲ. ನೀವು ಸ್ಟೇಟ್‌ಮೆಂಟ್ ಮಾಡಿಲ್ಲ.

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಕಾಲಿಂಗ್ ಅಟೆನ್‌ಷನ್‌ಗೆ ಯಾರು ಸಿಗ್ನೇಟರಿ ಇರುತ್ತಾರೆ ಅವರಷ್ಟೇ ರೈಸ್ ಮಾಡಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ: ನನಗೆ 20 ವರ್ಷಗಳ ಹಿಂದೆ ಒಂದು ಅನುಭವವಾಗಿದೆ. ದೇಶದ ಒಬ್ಬ ದೊಡ್ಡ ಲೀಡರ್ ಕರ್ನಾಟಕ ಭವನದಲ್ಲಿ ಇವರಿಗೆ ಹಲೋಜೀ ಎಂದು ಹೇಳಿದರು. ಇವರು ಇಮ್ಮೀಡಿಯಟ್ ಆಗಿ, ನಾನೂ ಅಲ್ಲೇ ಇದ್ದೇನೆ, ಹಲೋ ಫಾಯ್ ಎಂದರು. ನನಗೆ ಆಗ 20, 25 ವರ್ಷ ಇರಬೇಕು. ಇವರು ಈ ತರಹ ಹೇಳುವವರು ಈ ಮನೆಯಲ್ಲಿ ಕೂಡ ನಮ್ಮನ್ನು ಮೀಸ್‌ಲೀಡ್ ಮಾಡುತ್ತಾರಲ್ಲಾ. ಇದು ಯಾವ ನ್ಯಾಯ? ನಿಮ್ಮ ಮೂಲಕ ಅವರಿಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಸುಬ್ರಹ್ಮಣಿಯನ್‌ಸ್ವಾಮಿ ಆ ತರಹದಲ್ಲಿ ಮಾತನಾಡಿದರು. That is a slang language in English. So, he wanted to use that against me.

ಅದಕ್ಕೆ ಅವರಿಗೆ ಉತ್ತರ ಕೊಟ್ಟೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅವರು ಹಾಗೆ ಹೇಳಿದರು. ನಾವೇನೂ ಕಡಿಮೆ ಇಲ್ಲವೆಂದು ನೀವು ಹೇಳಿದಿರಿ. ಬುದ್ಧಿ ಹೇಳಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ತಾವು ಈಗಾಗಲೇ ಹೇಳಿದಂತೆ ಎಲ್ಲ ಸದಸ್ಯರ ಪ್ರಶ್ನೆ, ಸಮಸ್ಯೆ ಇದೇ ಇದೆ. ಇಡೀ ರಾಜ್ಯದ ಅಭಿವೃದ್ಧಿ ಕೆಲಸ ಕುಂಠಿತವಾಗುತ್ತಿದೆ. ಈ ನಿರ್ಣಯ ಸರ್ಕಾರದಲ್ಲಿ ತ್ವರಿತವಾಗಿ ಆಗದೇ ಹೋದರೆ ರಾಜ್ಯದ ಅಭಿವೃದ್ಧಿ ಬಹಳ ಕುಂಠಿತವಾಗುತ್ತದೆ. ರಾಜ್ಯದ ಅಭಿವೃದ್ಧಿಯ ಪರವಾಗಿ ನಾವು ತಕ್ಷಣದ ನಿರ್ಧಾರ ತೆಗೆದುಕೊಳ್ಳದೇ ಹೋದರೆ ಅಭಿವೃದ್ಧಿ ಕೆಲಸ ತಡವಾಗಿರುವುದರಿಂದಾಗಿ ಅನೇಕ ಸಮಸ್ಯೆಗಳು ನಿರ್ಮಾಣವಾಗುವುದರಿಂದ ಇದರ ಬಗ್ಗೆ ತಕ್ಷಣದಲ್ಲಿ ಉತ್ತರ ಕೊಡುವುದರ ಜೊತೆಯಲ್ಲಿ ಅಗತ್ಯ ಇದ್ದರೆ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿ ಸದನದ ಮೂಲಕ ಎಲ್ಲಾ ಸದಸ್ಯರೂ ಕುಳಿತು ಈ ಸದನದಲ್ಲಿ ಚರ್ಚೆ ಮಾಡಿ ತಕ್ಷಣ ನಿರ್ಣಯಕ್ಕೆ ಬರುವಂಥದ್ದಕ್ಕೆ ಇನ್-ರೆಟ್ರಾಸ್ಪೆಕ್ಟೀವ್, ದೊಡ್ಡ ಗುತ್ತಿಗೆದಾರರದ್ದು ಒಂದು ಸಮಸ್ಯೆ. ಸಣ್ಣ ಗುತ್ತಿಗೆದಾರರು ಪಾಪ ಅವರ ಗೋಳನ್ನು ಇವತ್ತು ನಾವು ಕೇಳದಂಥ ಸ್ಥಿತಿಯಾಗಿದೆ. ಅವರೆಲ್ಲಾ ಸಾಲಸೋಲ ಮಾಡಿಕೊಂಡು ಸಮಸ್ಯೆಯಲ್ಲಿದ್ದಾರೆ. ಅವರು ಯಾರು ಇವತ್ತು ಹೇಳುವವರು? ನಮ್ಮ ಹತ್ತಿರ ಬಂದು ಅವರು ಅಳುತ್ತಾರೆ. ಹಾಗಾಗಿ ಸರ್ಕಾರ ತಕ್ಷಣ ನಿರ್ಣಯ ತೆಗೆದುಕೊಳ್ಳಬೇಕಾದಂಥ ಅಗತ್ಯತೆ ಇದೆ. ಹಾಗಾಗಿ, ತಕ್ಷಣ ಆಗಬೇಕೆನ್ನುವುದರ ಬಗ್ಗೆ ಇಡೀ ಸದನದ

ಎಲ್ಲಾ ಸದಸ್ಯರ ಅಭಿಪ್ರಾಯವಿದೆ. ಹಾಗಾಗಿ, ಆ ವಿಷಯದ ಬಗ್ಗೆ ತಕ್ಷಣ ಆಗಬೇಕೆನ್ನುವಂಥದ್ದು ನಮ್ಮ ಅಭಿಪ್ರಾಯ. ಮತ್ತು ಇದರ ಬಗ್ಗೆ ಚರ್ಚೆಯಾಗಲಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಗುತ್ತಿಗೆದಾರರು ಓಡಿಹೋಗಿದ್ದಾರೆ.

ಅಧ್ಯಕ್ಷರು: ದಯಮಾಡಿ ತಡೆಯಿರಿ. ಆಯಿತು ಕುಳಿತುಕೊಳ್ಳಿ. ಸರ್ಕಾರ ಉತ್ತರ ಕೊಡುತ್ತದೆ. ಮಾನ್ಯ ಪ್ರಕಾಶ್‌ರವರು, ಮುಖ್ಯಮಂತ್ರಿಗಳು ಬಂದ ಮೇಲೆ ಉತ್ತರ ಕೊಡಿಸುತ್ತೇವೆಂದು ಹೇಳಿದ್ದಾರೆ. ಇಲ್ಲಿ 3–4 ಗಮನ ಸೆಳೆಯುವ ಸೂಚನೆಗಳಿವೆ. ಯಾವುದಕ್ಕೂ ಸರ್ಕಾರದಿಂದ ಉತ್ತರ ಬಂದಿಲ್ಲ. ಆದ್ದರಿಂದ, ಇನ್ನೊಂದು ಸಾರಿ ತೆಗೆದುಕೊಳ್ಳೋಣ.

ಶ್ರೀ ಸಿ.ಟಿ. ರವಿ: ನಿಯಮ 69ಕ್ಕೆ ಕನ್‌ವರ್ಟ್ ಮಾಡಿ. ಬೆಲೆ ಏರಿಕೆ ಯಾವ ಕಾರಣಕ್ಕಾಯಿತು ಎನ್ನುವ ಬಗ್ಗೆ ಚರ್ಚೆಯಾಗಬೇಕು. ಬರೀ ಉತ್ತರವಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಕ್ವೊಶ್ಚನ್ ಹವರ್‌ನಲ್ಲಿ ಬೇಕಾಗಿದ್ದರೆ ನೀವು ಕ್ವೊಶ್ಚನ್ ಅನ್ನು ಹೆಲ್ಡ್–ಓವರ್ ಮಾಡಬಹುದು. ಅನಂತರ, ಉತ್ತರ ತರಿಸಿ ಕೊಡುತ್ತೇನೆಂದು ಹೇಳಬಹುದು. ಗಮನ ಸೆಳೆಯುವ ಸೂಚನೆಗೆ ಹಾಗೆ ಹೇಳುವುದಕ್ಕೆ ಬರುವುದಿಲ್ಲ ಅಧ್ಯಕ್ಷರೆ. ಇದು ನಿಮ್ಮ ಕಾರ್ಯಾಲಯ ಏನಿದೆ ಅವರ ಜವಾಬ್ದಾರಿ. ಯಾವುದನ್ನು ಕಾಲಿಂಗ್ ಅಟೆನಷನ್ ಅನ್ನು ಅಜೆಂಡಾಗೆ ತರುತ್ತಾರೆ, ಅದಕ್ಕೆ ಉತ್ತರಗಳನ್ನು ರೆಡಿ ಮಾಡಿ ಇಟ್ಟುಕೊಂಡಿದ್ದು, ಸಂಬಂಧಿಸಿದ ಮೆಂಬರ್‌ಗೆ ಮತ್ತು ಇತರೆಯವರಿಗೆ ಸರ್ಕ್ಯುಲೇಟ್ ಮಾಡಬೇಕು.

ಅಧ್ಯಕ್ಷರು: ಕಳುಹಿಸಿದ್ದೇವೆ. ಮಾನ್ಯ ರಮೇಶ್ ಕುಮಾರ್‌ರವರೆ, ನಮ್ಮ ಕಾರ್ಯಾಲಯದಿಂದ ಸರ್ಕಾರಕ್ಕೆ ಹೋಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಹೇಳಿಕೆಯೇ ತಯಾರಾಗಿಲ್ಲವೆಂದರೆ, ಹೇಗೆ?

ಅಧ್ಯಕ್ಷರು: ನಮ್ಮ ಕಾರ್ಯಾಲಯದಿಂದ ಸರ್ಕಾರಕ್ಕೆ ಹೋಗಿದೆ. ಈಗ so far ಉತ್ತರಗಳು ಬಂದಿಲ್ಲ. ಏನೆಂದರೆ, ಆ ಪ್ರಶ್ನೆಗಳು ….

ಶ್ರೀ ಕೆ.ಆರ್. ರಮೇಶ್ ಕುಮಾರ್: ಆ ಪ್ರಶ್ನೆ ಬರಬಾರದು. ನಿಮ್ಮ ಹೇಳಿಕೆಗಳು ಸಿದ್ಧವಾಗಿಲಿಲ್ಲವೆಂದರೆ, ಅಜೆಂಡಾಕ್ಕೇ ತರಬಾರದು. ಇದು ಸರಿಯಾಗುವುದಿಲ್ಲ. It is not correct. We cannot run the Assembly like this. I am very very sorry. This is unpardonable.

ಅಧ್ಯಕ್ಷರು: ಹೀಗಾನಾಗಿದೆ ಎಂದರೆ ಕ್ವೊಶ್ಚನ್ ಹವರ್ ಇಲ್ಲ. ಈಗ ಅನೇಕ ಗಂಭೀರವಾದ ಪ್ರಸ್ತಾಪ ಮಾಡಿದ್ದಾರೆ, ವಿಚಾರಗಳನ್ನು ಅದಕ್ಕೆ ನಾನು ಅವಕಾಶ ಕೊಡುತ್ತಿದ್ದೇನೆ. ಸರ್ಕಾರ ರಿಯಾಕ್ಟ್ ಮಾಡಲಿ.

ಶ್ರೀ ಆರಗ ಜ್ಞಾನೇಂದ್ರ: ನಾಳೆ ಬೆಳಗ್ಗೆ ಉತ್ತರ ಕೊಟ್ಟರೂ ಅಡ್ಡಿಯಿಲ್ಲ. ಸಮಯ ನಿಗದಿ ಮಾಡಿ.

ಅಧ್ಯಕ್ಷರು: ಆಯಿತು, ನಾಳೆ ತೆಗೆದುಕೊಳ್ಳೋಣ ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು): ಹೇಳಿಕೆ ರೆಡಿ ಇದೆ ಸಾರ್. ಬೇಡವೆಂದು ಹೇಳುತ್ತಿದ್ದಾರೆ ಸಾರ್. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ....

ಶ್ರೀ ಜೆ.ಸಿ. ಮಾಧುಸ್ವಾಮಿ: ಕಾಪಿ ಕೊಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಯಾವ ಸದಸ್ಯರು ಗಮನವನ್ನು ಸೆಳೆದಿರುತ್ತಾರೆ, ಅವರಿಗೆ ಒಂದು ಕಾಪಿ ಹೋಗಬೇಕು. ನಂತರ, ಸದನದ ಇತರೆ ಎಲ್ಲಾ ಸದಸ್ಯರಿಗೆ ಕಾಪಿ ಲಭ್ಯವಾಗಬೇಕು. ನೀವು ಹೇಳಿಕೆ ಓದಿಯಾದ ಮೇಲೆ ಸ್ಪಷ್ಟೀಕರಣ ಕೇಳತಕ್ಕಂಥ ಅವಕಾಶ ಸಿಗ್ನೇಟರೀಸ್ ಯಾರಿರುತ್ತಾರೆ, ಅವರಿಗೆ ಸಿಗಬೇಕು. ಹೇಳಿಕೆಗಳು ತಯಾರಾಗಿಲ್ಲ. ಕಾಲಿಂಗ್ ಅಟೆನ್‌ಷನ್ ಅನ್ನು ಅಜೆಂಡಾಕ್ಕೆ ಹಾಕುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಜ್ಞಾನೇಂದ್ರರವರೆ, ನೀವೇನಾದರೂ ಈ ಕಡೆ ಈ ಸಂದರ್ಭದಲ್ಲಿ ಕುಳಿತಿದ್ದರೆ, ಏನಾಗುತ್ತಿತ್ತು ಹೇಳಿ ಸ್ವಲ್ಪ? ಯಾವ ಭಾಷೆ, ಯಾವ ವಿಧಾನ, ಯಾವ ರೀತಿಯಲ್ಲಿ ನೀವು, ಕಾಗೇರಿಯವರು ಇಬ್ಬರೂ ಈ ಕಡೆ ಇದ್ದಿದ್ದರೆ ಏನು ಮಾತನಾಡುತ್ತಿದ್ದಿರಿ?

(ಗೊಂದಲ)

ಅಧ್ಯಕ್ಷರು: ಆಯಿತು, ಇಲ್ಲಿಗೆ ಕ್ಲೋಸ್ ಮಾಡೋಣ. Let us go to next subject.

(ಗೊಂದಲ)

ಅಧ್ಯಕ್ಷರು: ಈಗ ದಯಮಾಡಿ ಸುಮ್ಮನೆ ಕುಳಿತುಕೊಳ್ಳಿ. ಈ ತರಹವಾಗಿದೆ. ಸರ್ಕಾರದಿಂದ ಉತ್ತರ ಬಂದಿಲ್ಲ. ಅನಂತರ, ಪ್ರಿಪೇರ್ ಆದಮೇಲೆ ಸರ್ಕ್ಯುಲೇಟ್ ಮಾಡುತ್ತಾರೆ. ತೆಗೆದುಕೊಳ್ಳೋಣ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಉತ್ತರ ಕೊಡಲಿಲ್ಲವೆಂದು ಸರ್ಕಾರಕ್ಕೆ ಛೀಮಾರಿ ಹಾಕಿ ಅಧ್ಯಕ್ಷರೇ

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ: ಪಿಡಬ್ಲ್ಯೂಡಿ ಮಿನಿಸ್ಟರ್ ರಿಪ್ಲೈ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಈಗ ಏನಾಗಿದೆ ಎಂದರೆ, ಸ್ಟೇಟ್‌ಮೆಂಟ್ ರೆಡಿಯಾಗಿಲ್ಲ... ಸರ್ಕ್ಯುಲೇಟ್ ಆಗಬೇಕು. ಈ ತರಹ ಇದೆ. ಆದ್ದರಿಂದ, ನಾಳೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಬಿ. ಶಿವರಾಮು: ಮಾನ್ಯ ಅಧ್ಯಕ್ಷರೆ, ಕಾರ್ಯಾಲಯದಿಂದ ಹೋಗಬೇಕು. ತಮಗೆ ಕಾಪೀಸ್ ಕಳುಹಿಸಬೇಕು. ಮಿನಿಸ್ಟರ್ ಫೈಲ್‌ನೊಳಗಿಟ್ಟುಕೊಂಡರೆ ಅದು ಏತಕ್ಕೆ ಬರುತ್ತದೆ? ಅವರು ಏನು ಮಾಡಿದರೂ ನಡೆಯುತ್ತದೆ.

ಶ್ರೀ ವಾಟಾಳ್ ನಾಗರಾಜ್: ಹೇಳಿಕೆ ಇದೆ ಎಂದು ಹೇಳುತ್ತಾರೆ. ತಾವು ಇಲ್ಲವೆಂದು ಹೇಳುತ್ತೀರಿ. ಜ್ಞಾನೇಂದ್ರರವರು ಬಂದಿಲ್ಲವೆಂದು ಹೇಳುತ್ತಾರೆ. ಈ ಮೂರು ಹೇಳಿಕೆಗಳು...

ಅಧ್ಯಕ್ಷರು: ಆಯಿತು, ಈಗ.....

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, 5 ನಿಮಿಷ ಟೈಂ ಕೊಡಿ. ಜೆರಾಕ್ಸ್‌ಗೆ ಹೋಗಿದೆ ಬರುತ್ತದೆ.

ಶ್ರೀ ಆರಗ ಜ್ಞಾನೇಂದ್ರ: ಆಮೇಲೆ ಕೊಡಿ ಸಾರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ರೇವಣ್ಣನವರು ಇವತ್ತು ಸರಿಯಾಗಿ ಸಮಯ ನೋಡಿಕೊಂಡು ಬಂದಿಲ್ಲ. ಅವರು ಮನೆ ಹೊರಗಡೆ ಬಿಡುವಾಗ ಘಳಿಗೆ ಎಲ್ಲಾ ನೋಡಿಕೊಂಡು ಅವರು ಹೊರಗೆ ಬರುತ್ತಾರೆ. ಇವತ್ತೇನೋ ಸರಿಯಾಗಿ ನೋಡಿಕೊಂಡು ಹೊರಗೆ ಬಂದಿಲ್ಲ. ಅದಕ್ಕೆ ಹೀಗಾಯಿತು. ಮತ್ತು ಹೋಂ ಅಂಡ್ ಪಾರ್ಲಿಮೆಂಟರಿ ಅಫೇರ್ಸ್ ಏಕೋ ಸುಮ್ಮನೆ ಕುಳಿತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನೀವು ಅಸಮಾಧಾನಕರವಾಗಿದ್ದೀರಲ್ಲಾ. ಮಂತ್ರಿ ಮಂಡಲ ರಚನೆಯಾದ ಮೇಲೆಯೂ ನೀವು ಸಮಾಧಾನವಾಗಿದ್ದೀರಿ. ಇದೇನು ಹಣೆಬರಹ?

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಇದನ್ನು ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ನೆಸ್ಟೆ ಸಬ್ಜೆಕ್ಟ್‌ಗೆ ಹೋಗೋಣ. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯ ಮಾನ್ಯ ಶ್ರೀರಾಮರೆಡ್ಡಿ ಯವರೇ, ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಮ್ಮ ಕಾಲಿಂಗ್ 2–3 ಇವೆ.

ಅಧ್ಯಕ್ಷರು: ಈಗ ಎಲ್ಲದಕ್ಕೂ ಉತ್ತರ ಕಳುಹಿಸಿಲ್ಲ.

(ಗೊಂದಲ)

ಅಧ್ಯಕ್ಷರು: ಉತ್ತರ ಕಳುಹಿಸಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಉತ್ತರ ಬಂದಿಲ್ಲ ಎಂದರೆ ಅಜೆಂಡದಲ್ಲಿ ಏಕೆ ಹಾಕಿದಿರಿ unless you get the reply? ಏಕೆ ಬಹಳ ಹರಿಬರಿಯಾಗಿದ್ದೀರಿ, ಏಕೆ? ಎಲ್ಲಾ ಮುಗಿಸಿ ಹೋಗಬೇಕೆಂದು ಮಾಡಿದ್ದೀರಾ? ಡಿಸಾಲ್ವ್ ಆಗುವುದಿಲ್ಲ ಸಾರ್ ಇನ್ನೂ ಟೈಂ ಇದೆ.

ಅಧ್ಯಕ್ಷರು: ಏನಾಗಿದೆ ಎಂದರೆ ಇಲ್ಲಿಂದ ಹೋಗಿದೆ ಅಲ್ಲಿಂದ ಉತ್ತರ ಬಂದಿಲ್ಲ, ಆದರೆ ಸಬ್ಜೆಕ್ಟ್ ಹಾಕಿದ್ದಾರೆ, ಒಂದು ಅವಕಾಶ ಕೊಡೋಣ ಎಂದು ಕರೆದೆ, ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಡಿಸಾಲ್ವ್ ಮಾಡಬೇಕಾದರೆ ಇನ್ನೂ ಒಂಭತ್ತು ಜನ ಬೇಕು. ಅದಕ್ಕೆ ಏಕೆ ಇಷ್ಟು ಹರಿಬರಿ? ಇನ್ನೂ ಟೈಂ ಇದೆ...

ಶ್ರೀ ವಾಟಾಳ್ ನಾಗರಾಜ್: ಅಲ್ಲಾ ಸ್ವಾಮಿ ತಾವು ಯಾವುದಕ್ಕೂ ಉತ್ತರ ಇಲ್ಲವೆಂದು ಹೇಳುತ್ತೀರಾ?

ಅಧ್ಯಕ್ಷರು: ಇನ್ನೂ ಉತ್ತರ ಬಂದಿಲ್ಲ.

ಶ್ರೀ ಈಶ್ವರಪ್ಪ ಕೆ.ಎಸ್. (ಜಲಸಂಪನ್ಮೂಲ ಸಚಿವರು): ನಾನು ನನ್ನ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಡಿ.ಕೆ. ಶಿವಕುಮಾರ್‌ರವರ ಜೊತೆಗೆ ಚರ್ಚೆ ಮಾಡಿಕೊಂಡು ಅದಕ್ಕೆ ಸಾಕಷ್ಟು ಮಾಹಿತಿಗಳು ಬೇಕೆಂದು ತಿಳಿದುಕೊಂಡು, ನಾವು ಅವರು ಒಟ್ಟಿಗೆ ಮೀಟಿಂಗ್ ಮಾಡಿಕೊಂಡು ತೀರ್ಮಾನ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಎಲ್ಲಿ ಮಾಡಿದಿರಿ?

ಶ್ರೀ ಕೆ.ಎಸ್. ಈಶ್ವರಪ್ಪ: ಇಲ್ಲಯೇ ಮಾಡಿದ್ದೇವೆ..

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಈಶ್ವರಪ್ಪನವರೇ, ದಯಮಾಡಿ ಕ್ಷಮಿಸಬೇಕು. ಹೊರಗಡೆ ಆದ್ರೆ ಆಗಲ್ಲ ಆದರೆ ಅದು ಇಲ್ಲಿ.